# ಕರ್ನಾಟಕ ರಾಜ್ಯ ಮಹಿಳಾ ಆಯೋಗ

ಕ್ರಮ ಸಂಖ್ಯೆ: ದಿನಾಂಕ :

ಸಂ:ಕರಾಮಆ/SHW/ಸರ್ವೆ/2020–21 25–11–2020

ಮಾನ್ಯರೇ,

**ವಿಷಯ:** ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ(ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ)ಅಧಿನಿಯಮ 2013, ಆಂತರಿಕ ದೂರು ಸಮಿತಿ ಸರ್ಕಾರಿ/ಖಾಸಗಿ ವಲಯದಲ್ಲಿ ರಚನೆಯಾಗಿರುವ/ರಚನೆಯಾಗದಿರುವ ಬಗ್ಗೆ ರಾಜ್ಯಾದ್ಯಂತ ಪರಿಶೀಲನೆ ಮತ್ತು ಸರ್ವೆ.

**ಉಲ್ಲೇಖ:** 1. ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ (ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ)ಅಧಿನಿಯಮ 2013.
2. ಸರ್ಕಾರದ ಆದೇಶ ಸಂಖ್ಯೆ:ಮಮಇ/28/ರಾಮಆ/2015, ಬೆಂಗಳೂರು ದಿನಾಂಕ:18–11–2015.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ(ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ)ಅಧಿನಿಯಮ 2013 ಆಂತರಿಕ ದೂರು ಸಮಿತಿ ಸರ್ಕಾರಿ/ಖಾಸಗಿ ವಲಯಗಳಲ್ಲಿ 10 ಅಥವಾ 10ಕ್ಕಿಂತ ಮೇಲ್ಪಟ್ಟು ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಲ್ಲಿ, ಆಂತರಿಕ ದೂರು ಸಮಿತಿ ರಚಿಸುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ತಮ್ಮ ಸಂಸ್ಥೆಯು ಆಂತರಿಕ ದೂರು ಸಮಿತಿ ರಚನೆ ಮಾಡಿದ್ದಲ್ಲಿ, ಪೂರ್ಣ ಮಾಹಿತಿಯೊಂದಿಗೆ ವರದಿಯನ್ನು Email ಅಥವಾ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ವಿಳಾಸಕ್ಕೆ 7 ದಿನಗಳೊಳಗಾಗಿ ಕಳುಹಿಸುವುದು, ಇಲ್ಲವಾದಲ್ಲಿ ಆಂತರಿಕ ದೂರು ಸಮಿತಿ ರಚನೆಯಾಗಿರುವುದಿಲ್ಲ ಎಂದು ಭಾವಿಸಿ, ನಿಯಮಾನುಸಾರ ಕೆಲಸದ ಸ್ಥಳದಲ್ಲಿ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳ(ತಡೆಗಟ್ಟುವಿಕೆ, ನಿಷೇಧಿಸುವಿಕೆ, ನಿವಾರಿಸುವಿಕೆ)ಅಧಿನಿಯಮ 2013ರಡಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಆದ್ದರಿಂದ ಕೂಡಲೇ ಈ ಬಗ್ಗೆ ಕ್ರಮವಹಿಸಿ, ವರದಿಯನ್ನು Email ಅಥವಾ ಕಛೇರಿ ವಿಳಾಸಕ್ಕೆ ನೇರವಾಗಿ ಮಾಹಿತಿ ನೀಡಲು ಹಾಗೂ ಈ ಸರ್ವೆ ಕಾರ್ಯಕ್ಕೆ ರಾಜ್ಯಾದ್ಯಂತ ಎಲ್ಲಾ ಸರ್ಕಾರಿ/ಖಾಸಗಿ ಸಂಸ್ಥೆಗಳು ಸಹಕರಿಸುವಂತೆ ಕೋರಲಾಗಿದೆ.

**ಕಛೇರಿ ವಿಳಾಸ ಮತ್ತು Email ID ಈ ಕೆಳಕಂಡಂತಿದೆ:**
ಕರ್ನಾಟಕ ರಾಜ್ಯ ಮಹಿಳಾ ಆಯೋಗ, ನಂ:107, 1ನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560009.
Email ID: kscw@karnataka.gov.in

ತಮ್ಮ ವಿಶ್ವಾಸಿ,

25/11/2020

ಕಾರ್ಯದರ್ಶಿ,
ಕ.ರಾ.ಮ.ಆ. ಬೆಂಗಳೂರು

ನಂ. 107, ಕಾವೇರಿ ಭವನ, 1ನೇ ಮಹಡಿ, ಕರ್ನಾಟಕ ಗೃಹ ಮಂಡಳಿ ಕಟ್ಟಡ, ಕೆ.ಜಿ. ರಸ್ತೆ, ಬೆಂಗಳೂರು – 560 009.
ದೂರವಾಣಿ : 080–22216485 / 86 ಫ್ಯಾಕ್ಸ್ : 080–22216485 / ಈ–ಮೇಲ್ : kscwbang@yahoo.co.in